ಗೌರವಾರ್ಥವಾಗಿ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸುವುದರ ಮೂಲಕ ತಮ್ಮ ಸಂತಾಪಸೂಚನೆಯನ್ನು ವ್ಯಕ್ತಪಡಿಸಬೇಕೆಂದು ಕೋರುತ್ತೇನೆ.

(ಸದನವು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು.)

ಅಧ್ಯಕ್ಷರು —ಮೃತ ಸದಸ್ಯರ ಕುಟುಂಬ ವರ್ಗದವರಿಗೆ ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಕಳಿಸಿಕೊಡಲಾಗುವುದು.

ಸರ್ಕಾರಿ ನಿರ್ಣಯ

ದಕ್ಷಿಣ ಆಫ್ರಿಕಾದ ಕಪ್ಪು ಜನತೆಯ ನಾಯಕ ಶ್ರೀ ನೆಲ್ಸನ್ ಮಂಡೇಲಾ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿರುವುದನ್ನು ಸ್ವಾಗತಿಸುವುದು

ಶ್ರೀ ವೀರೇಂದ್ರ ಪಾಟೀಲ (ಮುಖ್ಯಮಂತ್ರಿಗಳು) —ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿ ಕೋರಿ ಇನ್ನೊಂದು ನಿರ್ಣಯವನ್ನು ಸದನದ ಮುಂದೆ ಇಡುವುದಕ್ಕೆ ಇಚ್ಛಿಪಡುತ್ತೇನೆ. ಅದು ಹೀಗಿದೆ—

> 'ದಕ್ಷಿಣ ಆಫ್ರಿಕಾದ ಕಪ್ಪು ಜನತೆಯ ನಾಯಕ ಶ್ರೀ ನೆಲ್ಸನ್ ಮಂಡೇಲಾ ಅವರನ್ನು ಬಿಳಿಯರ ಸರ್ಕಾರ ಬಿಡುಗಡೆ ಮಾಡಿರುವುದನ್ನು ಸ್ವಾಗತಿಸುವ ನಿರ್ಣಯವನ್ನು ಈ ಸದನವು ಕೈಗೊಳ್ಳಬೇಕೆಂದು ಕೋರುತ್ತೇನೆ.'

ಅಧ್ಯಕ್ಷರು.—ನಿರ್ಣಯವನ್ನು ಸಭೆಯು ಮಂಡಿಸಲಾಗಿದೆ. ಶ್ರೀ ನೆಲ್ಸನ್ ಮಂಡೇಲಾ ಅವರು ಎಚ್ಚೆತ್ತ ಆಫ್ರಿಕಾದ ಒಂದು ದೊಡ್ಡ ಧ್ವನಿ. ಇಪ್ಪತ್ತೆರೆಡು ವರ್ಷಗಳ ಕಾಲ ಒಂದು ತತ್ವಕ್ಕೇ ಇಡೀ ಮಾನವ ಕುಲವೇ ಒಪ್ಪಿರತಕ್ಕಂಥ ಸೂತ್ರಕ್ಕೆ ಕಟ್ಟುಬಿದ್ದು ತುರಂಗವಾಸವನ್ನು ಅನುಭವಿಸತಕ್ಕಂಥ ಧಾರ್ಷ್ಟ್ಯತೆಯನ್ನು ಶ್ರೀ ನೆಲ್ಸನ್ ಮಂಡೇಲಾ ಅವರು ತೋರಿಸಿದ್ದರು. ಇಪ್ಪತ್ತೆರೆಡು ವರ್ಷಗಳಾದ ಮೇಲೆ ದಕ್ಷಿಣ ಆಫ್ರಿಕಾದಲ್ಲಿ ಎದ್ದಿರತಕ್ಕಂಥ ರಾಜಕೀಯ ಬಿರುಗಾಳಿಯ ನಿಮಿತ್ತ ಅವರು ಈ ದಿವಸ ಬಂಧನದಿಂದ ಮುಕ್ತರಾಗಿದ್ದಾರೆ ನಾನು ಮೊನ್ನೆ ತಾನೆ ವೆಸ್ಟ್ ಮಿನಿಸ್ಟರ್‌ನಲ್ಲಿ ನಡೆದಂಥ ಪಾರ್ಲಿಮೆಂಟರಿಯನ್ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾಗ.....

ಬ್ರಿಟಿಷ್ ಪಾರ್ಲಿಮೆಂಟೇರಿಯನ್‌ರವರ ದೃಷ್ಟಿಯನ್ನು ದಕ್ಷಿಣ ಆಫ್ರಿಕಾದಲ್ಲಿ, ಯಾವಾಗ ನೈಜ ಪ್ರಜಾಪ್ರಭುತ್ವ. ಒಬ್ಬ ಮನುಷ್ಯನಿಗೆ ಒಂದು ವೋಟು ಎನ್ನುವ ತತ್ವದ ಬುನಾದಿಯ ಮೇಲೆ ಯಾವಾಗ ನಡೆಯುತ್ತದೆ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದಾಗ, ಅವರಿಂದ ಸೂಕ್ತವಾದ ಉತ್ತರ ಬರಲಿಲ್ಲ. ಕಾರಣ ವಿಶ್ವಸಂಸ್ಥೆ ಮತ್ತು ಯಿಂಕ್ಕಿತರ ರಾಷ್ಟ್ರಗಳು ದಕ್ಷಿಣ ಆಫ್ರಿಕಾದ ಮೇಲೆ ಹೇರಿರತಕ್ಕ ಎಕನಾಮಿಕ್ ಸ್ಯಾಂಕ್ಷನ್ ಏನಿದೆ ಅದು ತೀವ್ರ ಸ್ವರೂಪದಲ್ಲಿ ಕಾರ್ಯರೂಪಕ್ಕೆ ಬಾರದೇ ಇದ್ದುದರಿಂದ. ದಕ್ಷಿಣ ಆಫ್ರಿಕಾದ ಬಿಳಿಯರ ಜನಾಂಗದ ದಬ್ಬಾಳಿಕೆ ಮುಂದುವರೆಯುತ್ತಾ ಇದೆ. ಆದರೆ ಈ ದಬ್ಬಾಳಿಕೆಯಲ್ಲಿ ಒಂದು ಆಸೆ ತರತಕ್ಕಂಥ ಬೆಳವಣಿಗೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ವಿವರಿಸಿದ ನೆಲ್ಸನ್ ಮಂಡೇಲ ಅವರ ಬಿಡುಗಡೆ. ಇದರಿಂದ ಇಡೀ ಜಗತ್ತಿನಲ್ಲಿ ಒಂದು ಸಮಾಧಾನದ ನಿಟ್ಟುಸಿರು ಬಿಡಲಾಗಿದೆ. ನೆಲ್ಸನ್ ಮಂಡೇಲಾ ಅವರನ್ನು ನಮ್ಮ ದೇಶದ ಪ್ರಧಾನ ಮಂತ್ರಿಗಳು, ನಮ್ಮ ದೇಶಕ್ಕೆ ಆಹ್ವಾನಿಸಿರತಕ್ಕಂಥಾದ್ದು ಅತ್ಯಂತ ಆದರಣೀಯ. ನೆಲ್ಸನ್ ಮಂಡೇಲಾರವರು ನಮ್ಮ ದೇಶಕ್ಕೆ ಬರತಕ್ಕಂಥ ದಿನಗಳನ್ನು ನಾವೆಲ್ಲರೂ ಕೂಡ ಕಾತುರತೆಯಿಂದ ನಿರೀಕ್ಷಿಸೋಣ. ಮತ್ತೊಮ್ಮೆ ಈ ಸದನದ ಪರವಾಗಿ ನೆಲ್ಸನ್ ಮಂಡೇಲಾರವರ ಬಿಡುಗಡೆ ದಕ್ಷಿಣ ಆಫ್ರಿಕಾದಲ್ಲಿ ನೈಜ ಪ್ರಜಾಪ್ರಭುತ್ವ ಸ್ಥಾಪನೆಗೆ ಇನ್ನೂ ಒಂದು ಹೊಸ ಹೆಜ್ಜೆ ಆಗಲಿ ಎಂದು ನಾವು ಭಾವಿಸಬಹುದಾಗಿದೆ.

† ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಶತಮಾನದಲ್ಲಿ, ಆ ಪೂರ್ವವಾಗಿರತಕ್ಕಂಥ ಒಂದು ಚಾರಿತ್ರಿಕ ಘಟನೆ ಶ್ರೀಮಾನ್ ನೆಲ್ಸನ್ ಮಂಡೇಲಾರವರು ಮತ್ತು ಅವರ ಜೊತೆಗೆ ಇದ್ದಂಥ ಶ್ರೀಮಾನ್ ಶಿಶಲು ಮತ್ತು ಇತ್ಯಾದಿಯವರು ಕಾರಾಗೃಹ ವಾಸದಲ್ಲಿ ಸುಮಾರು ೨೭ ವರ್ಷಗಳು ಕಳೆದು ಬಿಡುಗಡೆ ಹೊಂದಿರತಕ್ಕಂಥಾದ್ದು. ಒಬ್ಬ ಮನುಷ್ಯನ ಜೀವನದಲ್ಲಿ ಅಥವಾ ಹೋರಾಟದಲ್ಲಿ, ೨೭ ವರ್ಷಗಳು, ಇವು ಎಂತಹ ಮಹತ್ವದ ದಿನಗಳು ಎನ್ನುವುದನ್ನು ನಾನು ಪುನ: ಹೇಳುವ ಆವಶ್ಯಕತೆ ಇದೆಯೆಂದು ಭಾವಿಸಿಲ್ಲ. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ಗೆ ಮೊನ್ನೆ ಮೊನ್ನೆಯವರೆಗೂ. ದಕ್ಷಿಣ ಆಫ್ರಿಕಾ ಬಿಳಿಯರ ಸರ್ಕಾರ ಬಹಿಷ್ಕಾರ ಹಾಕಿತ್ತು. ಶ್ರೀಮಾನ್ ನೆಲ್ಸನ್ ಮಂಡೇಲಾರವರು ಬಿಡುಗಡೆ

ಆಗತಕ್ಕಂಥ ಸಂದರ್ಭದಲ್ಲಿ, ಎ ಎನ್.ಸಿ.ಗೂ ಕೂಡ ಅವರ ಮೇಲೆ ವಿಧಿಸಿರತಕ್ಕ ಪರತ್ತನ್ನು ರದ್ದು ಪಡಿಸಿ ದಕ್ಷಿಣ ಆಫ್ರಿಕಾ ಸರ್ಕಾರ ಅದಕ್ಕೆ ಮಾನ್ಯತೆಯನ್ನು ಕೂಡ ಕೊಟ್ಟಿರತಕ್ಕಂತಾದ್ದು, ಈ ಹೋರಾಟದಲ್ಲಿ ಯಾವ ಕಪ್ಪು ಬಣ್ಣದ ಜನ ಬಹುಪಾಲು ಜನ ಇದ್ದಾರೆ ಅವರಿಗೆ ರಾಷ್ಟ್ರದ ಮೇಲೆ ಆಡಳಿತದ ಹಕ್ಕನ್ನು ಪಡೆಯುವುದು, ಇದು ಒಂದು ಸ್ಪಷ್ಟವಾದ ಹೆಜ್ಜೆ ಎಂದು ತೋರಿಸುತ್ತದೆ. ದಕ್ಷಿಣ ಆಫ್ರಿಕಾ ದೇಶಗಳಲ್ಲಿ ಒಂದಾಗಿರತಕ್ಕ ಇನ್ನೊಂದು ಚಿಕ್ಕ ರಾಷ್ಟ್ರ, ಇದೂ ಕೂಡ ದಕ್ಷಿಣ ಆಫ್ರಿಕಾ ಆಡಳಿತದ ವ್ಯಾಪ್ತಿಗೆ ಒಳಪಟ್ಟಿದೆ, ಇದು ಕೂಡ ಬಿಳಿಯರ ಸರ್ಕಾರದಲ್ಲಿ ಇರುವಂಥ ನಮೀಬಿಯಾ, ಕೂಡ ಇದೇ ತಿಂಗಳು ೨೧ರಂದು ಸ್ವಾತಂತ್ರ್ಯ ಪಡೆಯುತ್ತಿದೆ. ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ವಿ. ಪಿ. ಸಿಂಗ್‌ರವರು ತಮ್ಮ ನಿಯೋಗದ ಜೊತೆಗೆ, ಅವರು ಸ್ವಾತಂತ್ರ್ಯ ಪಡೆಯುವ ದಿನದಂದು, ಹಾಜರಿರಲು ಹೋಗುತ್ತಿದ್ದಾರೆ.

ನಿಜವಾಗಲೂ ಇದು ಸ್ವಾಗತ ಮಾಡತಕ್ಕ ವಿಚಾರ. ನಮ್ಮ ರಾಷ್ಟ್ರದಲ್ಲಿರತಕ್ಕ ಎಲ್ಲಾ ರಾಜಕೀಯ ಪಕ್ಷಗಳು, ಕಾಂಗ್ರೆಸ್, ಜನತಾದಳ, ಕಮ್ಯುನಿಸ್ಟ್, ಹೀಗೆ ಎಲ್ಲಾ ರಾಜಕೀಯ ಪಕ್ಷಗಳೂ ಒಟ್ಟಾರೆಯಾಗಿ, ದಕ್ಷಿಣ ಆಫ್ರಿಕ ವಂತ್ತು ಅನೇಕ ಆಫ್ರಿಕನ್ ರಾಷ್ಟ್ರಗಳು, ಸ್ವಾತಂತ್ರ ಪಡೆಯುವುದಕ್ಕೋಸ್ಕರ ಯಾವ ಒಂದು ಹೋರಾಟವನ್ನು ಮಾಡಿಕೊಂಡು ಬರುತ್ತಿದೆ ಅದಕ್ಕೆ ಬೆಂಬಲವನ್ನು ಸೂಚನೆ ಮಾಡುತ್ತಲೇ ಬಂದಿವೆ. ನೆಲ್ಸನ್ ಮಂಡೇಲಾರವರ ಹೋರಾಟ ಒಬ್ಬ ವ್ಯಕ್ತಿಯ ಹೋರಾಟ ಅಲ್ಲ, ಲಕ್ಷಾಂತರ ಕೋಟ್ಯಾಂತರ ಜನ ನಿರಕ್ಷರ ಕುಕ್ಷಿಗಳು, ಸ್ವಾತಂತ್ರ್ಯದ ಅನುಭವವನ್ನು ಏನು ಪಡೆಯಬೇಕಾಗಿತ್ತೋ ಅದರಿಂದ ದೂರ ಇರತಕ್ಕಂಥ ವರ್ಗದ ಪ್ರತೀಕವಾಗಿರತಕ್ಕಂಥ ನಾಯಕತ್ವ, ಅದು ಸಣ್ಣ ನಾಯಕತ್ವ ಅಲ್ಲ, ಅಂತಹ ನಾಯಕತ್ವವನ್ನು ಅಲ್ಲಿ ಹೋಗಿ ನೆಲಸಿರತಕ್ಕಂಥ ಬಿಳಿಯರ ಸರಕಾರ ತನ್ನ ಕಪಿಮುಷ್ಟಿಯಲ್ಲಿಟ್ಟು ಇನ್ನೂ ಕೂಡಾ ಆಡಳಿತ ನಡೆಸುತ್ತಿದೆ. ಬಹುಪಾಲು ಇರತಕ್ಕಂಥ ಕಪ್ಪು ವರ್ಗದ ಜನರ ಮೇಲೆ ಆಡಳಿತ ನಡೆಸುತ್ತಿದೆ, ಎಂದರೆ ಎಂತಹ ಕ್ರೂರ ಆಡಳಿತದ ದವಡೆಯಲ್ಲಿ ಅಲ್ಲಿನ ಕಪ್ಪು ಜನ ಸಿಕ್ಕಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಮಹಾನ್ ಹೋರಾಟಗಾರರಾದ ಪೂಜ್ಯ ಮಹಾತ್ಮ ಗಾಂಧೀಜಿಯವರನ್ನು ನಾವು ನಮ್ಮ ರಾಷ್ಟ್ರದಲ್ಲಿ ನಾವು ಸ್ಮರಿಸುತ್ತೇವೆ. ಅಷ್ಟೇ ಪ್ರಾಮುಖ್ಯತೆ ಅಷ್ಟೇ ವ್ಯಕ್ತಿತ್ವವನ್ನು ಪಡೆದಿರತಕ್ಕಂಥ ಇನ್ನೊಬ್ಬ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಎಂದರೆ ನೆಲ್ಸನ್ ಮಂಡೇಲಾರವರು. ಅವರ ನಾಯಕತ್ವ ಕೇವಲ ದಕ್ಷಿಣ ಆಫ್ರಿಕಾಕ್ಕೆ ಮಾತ್ರ ಸೀಮಿತ ಗೊಂಡಿರತಕ್ಕಂಥ ವಿಚಾರ ಅಲ್ಲ. ಪ್ರಪಂಚದಲ್ಲಿ ಇನ್ನೂ ಎಲ್ಲೆಲ್ಲಿ ವರ್ಣಾಹತ್ಯಗಳು ಇದ್ದಾವೆ, ಎಲ್ಲೆಲ್ಲಿ ಇನ್ನೂ ಕೂಡಾ ಮತ್ತೊಂದು ರಾಷ್ಟ್ರದ ಕಪಿಮುಷ್ಟಿಯಲ್ಲಿ ಸ್ವಾತಂತ್ರ್ಯ ಕಳೆದುಕೊಂಡು ತೊಳಲಾಡುತ್ತಿರತಕ್ಕಂಥ ರಾಷ್ಟ್ರಗಳು ಇದ್ದಾವೆ. ಎಲ್ಲಿ ಹೋರಾಟ ಇನ್ನೂ ಪ್ರಾರಂಭವಾಗಬೇಕು, ಎಲ್ಲಿ ಹೋರಾಟ ಪ್ರಾರಂಭವಾಗಿ ನಡೆಯುತ್ತಿದೆ, ಅದಕ್ಕೆ ಸಂಪೂರ್ಣವಾಗಿ ಒಂದು ನಾಯಕತ್ವವನ್ನು ಕೊಡತಕ್ಕಂಥ ಒಂದು ನಾಯಕತ್ವ ಶ್ರೀಮಾನ್ ಮಂಡೇಲಾರವರದ್ದು. ಇಂತಹ ನಾಯಕತ್ವ ಜೈಲಿನಿಂದ ಹೊರಗೆ ಬಂದಿದೆಯೇ ಹೊರತು, ಜೈಲಿನ ಒಳಗೇ ಅದನ್ನು ಇಟ್ಟಿದ್ದರೂ ಕೂಡಾ ಅದು ಸ್ವಲ್ಪವೂ ಕುಂದಿರಲಿಲ್ಲ, ಹೋರಾಟದ ಧ್ವನಿಯನ್ನು ನೆಲ್ಸನ್ ಮಂಡೇಲಾರವರು ಎತ್ತಿದುದು, ಹಾಗೂ ಅದು ಇಡೀ ಪ್ರಪಂಚದ ಗಮನವನ್ನು ಸೆಳೆದುದು ಒಂದು ಸಂತೋಷದ ಸಂಗತಿ, ಬ್ರಿಟನ್, ಅಮೆರಿಕಾ ರಾಷ್ಟ್ರಗಳು ದಕ್ಷಿಣ ಆಫ್ರಿಕಾಕ್ಕೆ ಎಷ್ಟೇ ಬೆಂಬಲ ಕೊಡುತ್ತಾ ಬಂದಿದ್ದರೂ ಕೂಡಾ, ಪ್ರಪಂಚದ ಹಲವಾರು ರಾಷ್ಟ್ರಗಳ ಒತ್ತಡಕ್ಕೆ ಮಣಿದು, ಪ್ರಪಂಚ ಸಂಸ್ಥೆಯಲ್ಲಿ, ದಕ್ಷಿಣ ಆಫ್ರಿಕಾದ ಮೇಲೆ ಆರ್ಥಿಕ ದಿಗ್ಬಂಧನವನ್ನು ಹೇರುವುದಕ್ಕೆ ಅಮೇರಿಕಾ ಒಪ್ಪಿರತಕ್ಕಂಥಾದ್ದು ಇತ್ತೀಚಿನ ದಿನಗಳಲ್ಲಿ ನಡೆದ ಬಹಳ ಸಂತೋಷದ ಸಂಗತಿ. ಬ್ರಿಟನ್ ಪ್ರಧಾನಿ ಮಾರ್ಗರೇಟ್ ಥ್ಯಾಚರ್‌ರವರು ಇನ್ನೂ ಕೂಡ ಅವರ ಕಪಿಮುಷ್ಟಿಯನ್ನು ಸಡಿಲ ಮಾಡಿದರೆ ದಕ್ಷಿಣ ಆಫ್ರಿಕಾದಲ್ಲಿ ಕಪ್ಪು ವರ್ಗದವರಿಗೆ ಸ್ವಾತಂತ್ರ್ಯ ಇನ್ನೂ ಬೇಗ ಸಿಗುತ್ತಿತ್ತು ಎಂಬ ನಂಬಿಕೆ ಈಗಲೂ ಕೂಡಾ ಇದೆ. ಆ ವಿವರಗಳಿಗೆ ಈ ಸಂದರ್ಭದಲ್ಲಿ ನಾನು ಹೋಗದೇ, ನೆಲ್ಸನ್ ಮಂಡೇಲಾರವರು, ಶಿಸಿಲೂರವರು, ಕೊಲೆಯ ಅಪರಾಧದಲ್ಲಿ ಜೈಲಿಗೆ ತಳ್ಳಲ್ಪಟ್ಟಿದ್ದರು. ಇದು ರಾಜಕೀಯ ಕಾರಣಗಳಿಗೆ ಆದರೂ ಕೂಡಾ ತೋರಿಸಿದ್ದು ಮಾತ್ರ ಕೊಲೆಯ ಅಪರಾಧ. ಆದರೆ ಈಗ ಬಿಡುಗಡೆ ಮಾಡಿರತಕ್ಕಂಥಾದ್ದನ್ನು ನೋಡಿದರೆ ಅದು ಕೊಲೆಯ ಅಪರಾಧ ಅಲ್ಲ ಎಂದು ಪ್ರಪಂಚಕ್ಕೇ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಂತಹ ಸಂದರ್ಭದಲ್ಲಿ ಈ ಸ್ವಾತಂತ್ರ್ಯ ಹೋರಾಟಗಾರರ ಮಹಾನ್ ಸ್ವಾತಂತ್ರ್ಯ ಪ್ರೇಮ, ವ್ಯಕ್ತಿತ್ವ, ಮಾನವ ಹಕ್ಕುಗಳ ಬಗ್ಗೆ ಹೋರಾಟ ಮಾಡತಕ್ಕ ವ್ಯಕ್ತಿತ್ವ, ನಾಯಕತ್ವವನ್ನು ನಮ್ಮ ಭಾರತ ರಾಷ್ಟ್ರ ಮೆಚ್ಚಿದೆ.

ಅಧ್ಯಕ್ಷರೇ, ತಾವು ಹೇಳಿದಹಾಗೆ ಅವರ ಬರುವಿಕೆಯನ್ನು ನಾವು ಎದುರು ನೋಡುತ್ತಿದ್ದೇವೆ. ಅವರನ್ನು ನೋಡಬೇಕು. ಅವರ ವಿಚಾರಧಾರೆಗಳನ್ನು ತಿಳಿದುಕೊಳ್ಳಬೇಕೆಂದು ಇಡೀ ರಾಷ್ಟ್ರ ಕಾದಿದೆ ಪ್ರಪಂಚದ ಹಲವಾರು ರಾಷ್ಟ್ರಗಳು ಕಾದಿವೆ. ಇಂತಹ ಮಹಾನ್ ವ್ಯಕ್ತಿಯ ಬಿಡುಗಡೆಯ ಬಗ್ಗೆ ಏನು

ಒಂದು ನಿರ್ಣಯವನ್ನು ಮಂಡಿಸಿ ಒಪ್ಪಿಗೆಗೆ ಇಟ್ಟಿದ್ದೇವೆ. ಅದಕ್ಕೆ ಎಲ್ಲರೂ ಕೂಡಾ ಬೆಂಬಲ ಕೊಡಬೇಕು. ಇದಕ್ಕೆ ಒಂದು ತಿದ್ದುಪಡಿ ಆದರೆ ಒಳ್ಳೆಯದು ಎಂದು ನನ್ನ ಸೂಚನೆ. ಅವರ ಬಿಡುಗಡೆ ಆಗಿದ್ದನ್ನು ನಾವು ಸ್ವಾಗತ ಮಾಡುತ್ತಿದ್ದೇವೆ, ಆದರೆ ಅವರ ಹೋರಾಟಕ್ಕೆ ನಮ್ಮ ಬೆಂಬಲವನ್ನು ಮುಂದುವರಿಸ ಬೇಕೆಂದು ಒಂದು ಮಾತನ್ನು ಸೇರಿಸಿದರೆ, ಇನ್ನೂ ಕೂಡಾ ಇದು ದೊಡ್ಡ ಮಹತ್ವದ ನಿರ್ಣಯ ಆಗಬಹುದೆಂದು ನನ್ನ ಸೂಚನೆ, ಮಾನ್ಯ ಅಧ್ಯಕ್ಷರು, ಸಭಾನಾಯಕರು, ಸಭೆ ಇದನ್ನು ಗಮನಿಸಿದರೆ ಒಳ್ಳೆಯದು. ಇಷ್ಟು ಹೇಳಿ ನನ್ನ ಮಾತನ್ನು ಮುಂಗಿಸುತ್ತೇನೆ.

ಅಧ್ಯಕ್ಷರು.—ಈಗ ರಾಜ್ಯಪಾಲರ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುವುದು.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ.— ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದನಂತರ ರಾಷ್ಟ್ರಾಧ್ಯಕ್ಷರ ಅಥವಾ ರಾಜ್ಯಪಾಲರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ವಿವರಣಾ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ. ಅದು ಈ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
೧	೨	೩	೪
೧	೧೯೮೯ನೇ ಇಸವಿಯ ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ವಿಧೇಯಕ	೩-೯-೧೯೮೯	ರಾಷ್ಟ್ರಪತಿಯವರು
೨	೧೯೮೯ನೇ ಇಸವಿಯ ಕರ್ನಾಟಕ ಧನವಿನಿಯೋಗ (ನಂ. ೨) ವಿಧೇಯಕ	೫-೧೨-೧೯೮೦	ರಾಜ್ಯಪಾಲರು
೩	೧೯೮೯ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ ಕಾನೂನುಗಳ (ತಿದ್ದುಪಡಿ) ವಿಧೇಯಕ	೫-೧೨-೧೯೮೦	ರಾಜ್ಯಪಾಲರು

ಅಧ್ಯಕ್ಷರು.—ಮಂಡಿಸಲಾಯಿತು.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುವುದು.

ಕಾಗದ ಪತ್ರಗಳ ಮಂಡನೆ

I SRI M. VEERAPPA MOILY (Hon'ble Minister for Information Law and Parly. Affairs On behalf of SRI VEERENDRA PATIL (Chief Minister).—to lay.

1 Notification No. LAW 3 LGN, 90 dated: 19th February 1990.

Ordinance, No. 1 of 1990.

The Karnataka Municipal Corporations (Amendment) Ordinance 1990

as required under Article 213 (2) (A) of the Constitution of India.